# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ನಿಯಮಿತ ಪಡೆಯುವ ರೂ.800.00 ಕೋಟಿ ರಸಗೊಬ್ಬರದ ಸಾಲದ ಖಾತ್ರಿ ಅವಧಿಯನ್ನು ವಿಸ್ತರಿಸುವ ಬಗ್ಗೆ.

**ಸರ್ಕಾರದ ಆದೇಶ ಸಂಖ್ಯೆ: ಕೃಇ/06/ಕೃರಾಗೊ/2014**
**ಬೆಂಗಳೂರು, ದಿ: 04-06-2014.**

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ:ಕೃಇ/45/ಕೃಯೋಕಾ/2014, ದಿ:11-04-14.
2. ಸರ್ಕಾರಿ ಆದೇಶ ಸಂ:ಕೃಇ/07/ಕೃರಾಗೊ/2013, ಬೆಂಗಳೂರು, ದಿ:22-10-2013.
3. ದಿ: 08-11-2013ರ ಕಾಪು ದಾಸ್ತಾನು ಸಮಿತಿ ಸಭೆಯಲ್ಲಿ ನಡೆದ ಚರ್ಚೆ ಹಾಗೂ ತೀರ್ಮಾನದ ಅನ್ವಯ.
4. ದಿ: 03-12-2013 ರಂದು ಮಾನ್ಯ ಕೃಷಿ ರಾಜ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ತೀರ್ಮಾನಿಸಿದಂತೆ.
5. ಕೃಷಿ ಆಯುಕ್ತರ ಪತ್ರ ಸಂ: ರಗೊವಿ/ಕಾ.ದಾ/ಅನು/2013-14, ದಿ: 10-01-2014.

## ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1) ರಲ್ಲಿ 2013-14ನೇ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ರಾಸಾಯನಿಕ ಗೊಬ್ಬರಗಳ ತಾತ್ಕಾಲಿಕ ಸಂಗ್ರಹಕ್ಕಾಗಿ ಸಹಾಯಧನ ಯೋಜನೆಯನ್ನು 2014-15ನೇ ಸಾಲಿನಲ್ಲಿ ಮುಂದುವರೆಸಲು ಸರ್ಕಾರದ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ (2) ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ 2013-14ನೇ ಸಾಲಿನಲ್ಲಿ ರಸಗೊಬ್ಬರ ಖರೀದಿಗೆ ವಿವಿಧ ಬ್ಯಾಂಕುಗಳು /ಹಣಕಾಸು ಸಂಸ್ಥೆಗಳ ಮೂಲಕ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ರವರಿಗೆ ರೂ.1000.00 ಕೋಟಿಗಳ ದುಡಿಯುವ ಬಂಡವಾಳ (Working Capital) ಸಾಲಕ್ಕೆ ಸರ್ಕಾರದ ಖಾತ್ರಿಯನ್ನು ದಲ್ಲಾಳಿ ವೆಚ್ಚ (Guarantee Commission) ಪಾವತಿಸುವ ಷರತ್ತಿನೊಂದಿಗೆ ಬಡ್ಡಿ ಪಾವತಿಯ ಮಿತಿಗೊಳಪಟ್ಟು ದಿ: 01-04-2013 ರಿಂದ 31-03-2014 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಮೇಲೆ (3) ಮತ್ತು (4) ರಲ್ಲಿ ಓದಲಾದ ಕಾಪು ದಾಸ್ತಾನು ಸಮಿತಿ ಸಭೆಯ ನಡವಳಿಯಲ್ಲಿ ರಾಜ್ಯದ ರೈತರಿಗೆ ಸಕಾಲದಲ್ಲಿ ರಸಗೊಬ್ಬರ ಪೂರೈಕೆ ಮಾಡುವ ಸಲುವಾಗಿ ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯ ಮೂಲಕ ರಸಗೊಬ್ಬರ ಕಾಪು ದಾಸ್ತಾನು ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ಇದರಿಂದ ರಾಜ್ಯದ ರೈತರಿಗೆ ಅವಶ್ಯಕ ರಸಗೊಬ್ಬರಗಳನ್ನು ಸಕಾಲದಲ್ಲಿ ಪೂರೈಸಲು ಸಹಾಯವಾಗುತ್ತಿದೆ. ಆದ್ದರಿಂದ ಕಾಪು ದಾಸ್ತಾನು ಸಮಿತಿ ಸಭೆಯಲ್ಲಿ 2014-15ನೇ ಸಾಲಿಗೂ ಸಹ ರಸಗೊಬ್ಬರ ಕಾಪು ದಾಸ್ತಾನು ಮುಂದುವರೆಸಲು ತೀರ್ಮಾನಿಸಲಾಗಿರುತ್ತದೆ.

ಮೇಲೆ (5) ರಲ್ಲಿ ಕೃಷಿ ಆಯುಕ್ತರು ರವರ ಪತ್ರದಲ್ಲಿ ಮುಂಗಾರು 2014ರ ಹಂಗಾಮಿನಲ್ಲಿ ರಸಗೊಬ್ಬರ ಖರೀದಿಸಿ ಸಂಬಂಧಿಸಿದ ಕಂಪನಿಗಳಿಗೆ ಹಣ ಪಾವತಿ ಮಾಡಬೇಕಾದಲ್ಲಿ ಸರ್ಕಾರವು ಪುನಃ ಬ್ಯಾಂಕ್ ಸಾಲ ಖಾತ್ರಿ ಸೌಲಭ್ಯವನ್ನು ದಿ: 01-04-2014 ರಿಂದ 31-03-2015 ರವರೆಗೆ ವಿಸ್ತರಿಸಲು ಆದೇಶ ನೀಡುವಂತೆ ಕೋರಿರುತ್ತಾರೆ.

ಈ ಮೇಲೆ ತಿಳಿಸಿದ ವಿಷಯವನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

## ಆದೇಶ

ಮೇಲೆ ವಿವರಿಸಲಾದ ಕಾರಣಗಳ ಹಿನ್ನಲೆಯಲ್ಲಿ, 2014-15ನೇ ಸಾಲಿನಲ್ಲಿ ರಸಗೊಬ್ಬರ ಖರೀದಿಗೆ ವಿವಿಧ ಬ್ಯಾಂಕುಗಳ ಮೂಲಕ ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿ ರವರಿಗೆ ರೂ.800.00 ಕೋಟಿಗಳ (ಎಂಟು ನೂರು ಕೋಟಿ ರೂಪಾಯಿಗಳು ಮಾತ್ರ) ದುಡಿಯುವ ಬಂಡವಾಳ (Working Capital) ಸಾಲಕ್ಕೆ ಸರ್ಕಾರದ ಖಾತ್ರಿಯನ್ನು ದಲ್ಲಾಳಿ ವೆಚ್ಚ (Guarantee Commission) ಶೇ 1 ರಷ್ಟು Guarantee Act 1999 ರನ್ವಯ ಪಾವತಿಸುವ ಷರತ್ತಿನೊಂದಿಗೆ ಬಡ್ಡಿ ಪಾವತಿಯ ಮಿತಿಗೊಳಪಟ್ಟು ದಿ: 01-04-2014 ರಿಂದ ದಿ: 31-03-2015 ರವರೆಗೆ ವಿಸ್ತರಿಸಿ ಆದೇಶಿಸಿದೆ.

ರಾಸಾಯನಿಕ ಗೊಬ್ಬರದ ಮೇಲಿನ ಬಡ್ಡಿ ಸಹಾಯಧನವನ್ನು 2014-15ನೇ ಸಾಲಿನ ಆಯವ್ಯಯದಲ್ಲಿ ಒದಗಿಸಿದ ಲೆಕ್ಕ ಶೀರ್ಷಿಕೆ: 2401-00-103-0-15 (ಯೋಜನೆ) ಉಪ ಶೀರ್ಷಿಕೆ -106 ರಲ್ಲಿ ಭರಿಸತಕ್ಕದ್ದು.

ರಸಗೊಬ್ಬರ ಪೂರೈಕೆಯ ಎಲ್ಲಾ ವಹಿವಾಟುಗಳನ್ನು ESCROW ಖಾತೆ ಮೂಲಕವೇ ನಡೆಸುವುದು ಹಾಗೂ ಹಿಂದೆ ವಿಧಿಸಿದ ಎಲ್ಲಾ ಷರತ್ತುಗಳು ವಿಸ್ತರಿಸಿದ ಅವಧಿಗೂ ಅನ್ವಯವಾಗುವಂತೆ ಮುಂದುವರೆಸಲು ಆದೇಶಿಸಿದೆ.

ಮೇಲ್ಕಂಡ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ/122/ವೆಚ್ಚ-4/2014, ದಿ: 23-05-2014 ರಲ್ಲಿ ನೀಡಿರುವ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮಂಜುನಾಥ್ ಪಾಟೀಲ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಪ್ರತಿಯನ್ನು:-

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ, ಬೆಂಗಳೂರು-01.
3. ಪ್ರಧಾನ ಮಹಾಲೇಖಪಾಲರು (A&E), ಕರ್ನಾಟಕ ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು
4. ಸರ್ಕಾರದ ಮುಖ್ಯ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿರವರಿಗೆ , ವಿಧಾನಸೌಧ.
5. ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿ, ವಿಧಾನಸೌಧ.
6. ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ, ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ಬೆಂಗಳೂರು.
8. ಆಯುಕ್ತರು/ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
9. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿಯಮಿತ, ಕನ್ನಿಂಗ್ ಹ್ಯಾಮ್ ರಸ್ತೆ, ಬೆಂಗಳೂರು-560 052.
10. ಸಹಕಾರ ಸಂಘಗಳ ನಿಭಂದಕರು, ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
11. ಸಹಕಾರ ಸಂಘಗಳ ಅಪರ ನಿಭಂದಕರು (ಬಳಕೆ ಮತ್ತು ಮಾರಾಟ), ನಂ-1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-560 052.
12. ಡೆಪ್ಯುಟಿ ಜನರಲ್ ಮ್ಯಾನೇಜರ್, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು (IFB ಶಾಖೆ), ಎಂ.ಜಿ.ರಸ್ತೆ, ಬೆಂಗಳೂರು-560 001.
13. ನಿರ್ದೇಶಕರು, ಖಜಾನೆ ಇಲಾಖೆ(SHT), ಬೆಂಗಳೂರು.
14. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
15. ಸರ್ಕಾರದ ಅಧೀನ ಕಾರ್ಯದರ್ಶಿ (ವೆಚ್ಚ-4 ಮತ್ತು 5), ಆರ್ಥಿಕ ಇಲಾಖೆ.
16. ಆಂತರಿಕ ಆರ್ಥಿಕ ಸಲಹೆಗಾರರು, ಕೃಷಿ ಮತ್ತು ತೋಟಗಾರಿಕೆ ಇಲಾಖೆ.
17. ಶಾಖೆಯ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.